## 2

ರಾವಬಹದ್ದೂರ್ ದೇಸಾಯರ ಗ್ರಂಥ ಬರವಣಿಗೆಯ ಹುಕಿ ಇಂಥ ಉತ್ತುಂಗದಲ್ಲಿರುವಾಗಲೇ 'ಕನ್ನಡ ವಾಣಿ' ಎಂಬ ಲೋಕಲ್ ಪತ್ರಿಕೆಯಲ್ಲಿ ಆವರೆಗೆ ಅವರು ಹೆಸರೇ ಕೇಳಿರದಿದ್ದ ಹುಲಗಪ್ಪ ಗೊಂಡರ್ ಎಂಬ ಛೋಟಾ ರಿಸರ್ಚರ್, ತ್ರಿಭುವನ ಮಹಿಪಾಲರ ಬಗ್ಗೆ ಮೂರು ಪುಟಗಳ ಲೇಖನ ಬರೆದುಬಿಟ್ಟಿದ್ದ. ಯಾವಯಾವುದೋ ವಿವರಗಳನ್ನು ಎಲ್ಲೆಲ್ಲಿಂದಲೋ ತಂದು, ಪೋಣಿಸಿ ಮಹಿಪಾಲರ ರಾಜ್ಯ ಕುರಿತು ಅವನು ಕೊಟ್ಟಿದ್ದ ಇಂಥ ಜವಾರಿ ವಿವರಗಳು ದೇಸಾಯರ ಕಣ್ಣಿಗೆ ಬಿದ್ದಿರಲಿಲ್ಲ. ಈ ಲೇಖನ ಪ್ರಕಟವಾಗುವ ಸುಳಿವು ಮೊದಲೇ ಸಿಕ್ಕಿದ್ದರೆ, ಆ ಜುಜುಬಿ ಪೇಪರಿನ ಇಡೀ ಬಂಡಲನ್ನು ಯಾರ ಕೈಲಾದರೂ ಕೊಂಡು ತರಿಸಿ ರದ್ದಿಗೆ ಎಸೆಯಬಹುದಿತ್ತಲ್ಲವೆ ಎನ್ನಿಸತೊಡಗಿತು; ಇಂಥ ಕ್ರಿಮಿನಲ್ ಯೋಚನೆ ತಮ್ಮೊಳಗೆ ಸುಳಿದದ್ದಕ್ಕೆ ತಕ್ಷಣ ದೇಸಾಯರು ಪೆಚ್ಚಾದರು... 'ಎಂಥ ದೊಡ್ಡ ಲೇಖಕನಾದರೂ ಅವನ ಮನಸ್ಸಿನಲ್ಲಿ ಸಣ್ಣ, ದೊಡ್ಡ, ಕ್ಷುದ್ರ, ಘನ ಮುಂತಾದ ಎಲ್ಲ ಬಗೆಯ ಭಾವಗಳೂ ಹಾದು ಹೋಗುವುದು ಸಹಜವಲ್ಲವೆ! ಇಲ್ಲದಿದ್ದರೆ ಲೇಖಕನೊಬ್ಬ ಹಲ ಬಗೆಯ ಪಾತ್ರಗಳ ಒಳಹೊಕ್ಕು ಸೃಷ್ಟಿಸುವುದಾದರೂ ಹೇಗೆ ಸಾಧ್ಯ?' ಎಂದು ಒಳಗೊಳಗೇ ಸಮಾಧಾನ ಮಾಡಿಕೊಂಡರು...

ಈ ಸಮಾಧಾನದಲ್ಲಿ ದೇಸಾಯಿ ಮತ್ತೆ ಅರೆ ಮನಸ್ಸಿನಿಂದ ಹುಲಗಪ್ಪನ ಲೇಖನದ ಮೇಲೆ ಕಣ್ಣಾಡಿಸಿದರು. ಹುಡುಗನ ಬರವಣಿಗೆ ಅವರ ಮನಸ್ಸನ್ನು ಹಿಡಿದಿಡತೊಡಗಿತು. ತೀರಾ ವಿಶಿಷ್ಟ ಎನ್ನುವಂಥ ಶೈಲಿಯೇನಲ್ಲ; ಆದರೆ ಈ ಕಾಲದ ಆಡುಮಾತಿಗೆ ಹತ್ತಿರವಾದ ನೇರ, ಖಡಕ್ ಶೈಲಿ. ವಿಜ್ಞಾನ ಬರವಣಿಗೆಯಂತೆ ಎಲ್ಲವೂ ಸ್ಪಷ್ಟ. ಹೀಗೆಂದುಕೊಳ್ಳುತ್ತಾ ಮುಂದಿನ ಪ್ಯಾರಾಕ್ಕೆ ಬಂದಾಗ ಕಣ್ಣಿಗೆ ಬಿದ್ದ ಮೂರು ಸಾಲುಗಳಲ್ಲಿನ ವಿವರಗಳ ಝಳಕ್ಕೆ ದೇಸಾಯಿ ಬೆವೆತುಹೋದರು. 'ಹದಿನೇಳು–ಹದಿನೆಂಟನೇ ಶತಮಾನದ ನಡುವೆ ಆಳಿದ ತ್ರಿಭುವನ ಮಹಿಪಾಲರ್ ಮೂಲತಃ ಗೊಂಡರ್ ಜಾತಿಯವರಾಗಿದ್ದರು; ಅವರು ರಾಜ ಪಟ್ಟಕ್ಕೇರುವಾಗ, ಅವರ ಹೊಸ ಹೆಸರಿಗೆ ಜಾತಿಯ ಉಪನಾಮವನ್ನೂ ಸೇರಿಸಿ 'ತ್ರಿಭುವನ ಮಹಿಪಾಲ ಗೊಂಡರ್' ಎಂದು ಕರೆದಿರಬಹುದು; ನಂತರ ಅದೇ ಹೆಸರನ್ನು ಕೊಂಚ ಚಿಕ್ಕದಾಗಿಸಿ ತ್ರಿಭುವನ ಮಹಿಪಾಲರ್ ಎಂದು ಕರೆದಿರುವ ಸಾಧ್ಯತೆ ಇದೆ' ಎಂದು ಹುಲಗಪ್ಪ ಯಾವ್ಯಾವುದೋ ಶಾಸನಗಳ ಆಧಾರದ ಮೇಲೆ ತೋರಿಸಿದ್ದ. ಅದೇ ಪ್ಯಾರಾದ ಕೊನೆಗೆ, 'ಒಂದು ಸಾಧಾರವಾದ ಊಹೆಯ ಮೂಲಕ ಹೇಳುವುದಾದರೆ, ಕೊನೆಯ ಪಕ್ಷ ಏಳೆಂಟು ತಲೆಮಾರುಗಳ ಕೆಳಗೆ ಆಳಿದ್ದ ಮಹಿಪಾಲರ ವಂಶದ ಈಚಿನ ತಲೆಮಾರು ನನ್ನದಿರಬಹುದು' ಎಂದೂ ಸೇರಿಸಿದ್ದ! ಈ ಸಾಲು ದೇಸಾಯರಲ್ಲಿ ವಿಚಿತ್ರ ತಳಮಳ ಹುಟ್ಟಿಸಿತು.

ತ್ರಿಭುವನ ಮಹಿಪಾಲರ ಬಗ್ಗೆ ನಾನು ಬರೆಯಲಿರುವುದನ್ನು ಎಲ್ಲ ಜಾತಿಗಳ ಓದುಗರೂ ಮೆಚ್ಚಿ ಕೊಂಡಾಡಬಹುದಾದರೂ, ಈ ಹುಡುಗ ಮಹಿಪಾಲರ ಜಾತಿಗೆ ಸೇರಿದವನು ಎಂಬ ಕಾರಣಕ್ಕೆ ಓದುಗರ, ವಿಮರ್ಶಕರ ವಿಶೇಷ ಗಮನ ಸೆಳೆಯುವ ಸಾಧ್ಯತೆಯಿದೆ! ಮಹಿಪಾಲರ ಬಗ್ಗೆ ಇರುವ ಇಂಗ್ಲಿಷ್, ಕನ್ನಡ, ಮರಾಠಿ, ಹಿಂದಿ ಪುಸ್ತಕಗಳನ್ನೆಲ್ಲ ಸೋಸಿ ಕುಡಿದಿರುವ ದೇಸಾಯರಿಗೆ ಎಲ್ಲೂ ಮಹಿಪಾಲರ ಜಾತಿಯ ಪಕ್ಕಾ ಮಾಹಿತಿ ದೊರಕಿರಲಿಲ್ಲ! ಹೀಗಾಗಿ ತಮ್ಮ ಹಿಂದಿನ ಕಾದಂಬರಿಗಳಲ್ಲಿ, ಪುಸ್ತಕಗಳಲ್ಲಿ ಬಂದಿರುವ ಕ್ಷತ್ರಿಯ ಗುಣಗಳನ್ನೆಲ್ಲ ಮಹಿಪಾಲರ ವ್ಯಕ್ತಿತ್ವ, ಮಾತು, ಭಂಗಿಗಳಿಗೆ ಜೋಡಿಸಿ ಪುಟಗಟ್ಟಲೆ ವರ್ಣಿಸಿದ್ದರು; ಅದನ್ನು ಈಗ ಬೇರೊಂದು ರೀತಿಯಲ್ಲಿ ಸಮರ್ಥಿಸಿಕೊಂಡರು: ತ್ರಿಭುವನ ಮಹಿಪಾಲರು ಜಾತಿಯ ಕಾರಣಕ್ಕೆ ಅವಜ್ಞೆಗೊಳಗಾಗಬಾರದು ಎಂದೇ ಆ ಕಾಲದ ಪಂಡಿತರು, ಪುರೋಹಿತರು ಈ ಹೊಸ ನಾಮಕರಣ ಮಾಡಿದಂತಿದೆ. ಜೊತೆಗೆ ಕಾಲಕಾಲಕ್ಕೆ ಸಂಶೋಧಕರು ಮೂರು ನಾಲ್ಕು ಜಾತಿಗಳ ಹೆಸರನ್ನು ಮಹಿಪಾಲರ ತಲೆಗೆ ಕಟ್ಟಿದಂತಿದೆ. ಥತ್! ಈ ಕಾಲದ ಸಂಶೋಧನೆಗಳ ತಲೆಬುಡವೇ ನನ್ನ ತಲೆಗೆ ಹೋಗುವುದಿಲ್ಲ! ಅದರಲ್ಲೂ ಈ ಶೂದ್ರಾತಿಶೂದ್ರ ಜಾತಿಗಳ ನಡುವಿನ ಫರಕೇ ನನಗೆ ಅರ್ಥವಾಗುವುದಿಲ್ಲ. ಈ ಎಲ್ಲರೂ ಮಾಂಸಾಹಾರಿಗಳೇ; ಅವರ ದೇವರು, ಜಾತ್ರೆ, ಹಬ್ಬ, ಬಲಿ ಎಲ್ಲವೂ ಹೆಚ್ಚು ಕಡಿಮೆ ಒಂದೇ ಥರ. ಇವರ ನಡುವೆ ಇನ್ನೇನು ಮಹಾ ಫರಕು! ಅಯ್ಯೋ! ಈ ಕಾಲದಲ್ಲಿ ಹೀಗೆಲ್ಲ ಮಾತಾಡುವುದು ಕೂಡ ಕಷ್ಟ. ಎಲ್ಲ ಜಾತಿಗಳಿಂದಲೂ ಹೊಸ ಹೊಸ